ನನ್ನಿಂದ ಹಾಳಾಗುವುದು ಬೇಡ. ಅವಳು ಇಷ್ಟ ಪಟ್ಟರೆ ತೆಗೆದುಕೊಳ್ಳುತ್ತಾಳೆ ಅಷ್ಟೆ. ಸುಮನ ಮಕ್ಕಳಿಗೂ ಅನ್ಯಾಯ ಆಗಬಾರದು. ಇಂಥ ಯೋಚನೆಗಳನ್ನೆಲ್ಲ ಇಲ್ಲೇ ಬಿಟ್ಟುಬಿಡಿ...' ಅವಳು ನಿರ್ಧಾರಯುತವಾಗಿ ಹೇಳುತ್ತಿದ್ದಂತೆಯೇ ಹೊರಗೆ ಕಾರಿನ ಹಾರ್ನ್... ಜೊತೆಯಲ್ಲಿಯೇ ಪುಟ್ಟನ 'ಅಜ್ಜೀ... ಐ ಆಂ ಹಿಯರ್...' ಎಂಬ ಕೂಗು.

ಎಲ್ಲರೂ ಸಂಭ್ರಮದಿಂದ ಸಂಜೆ ಕಳೆದು, ರಾತ್ರಿ ಸುಮತಿ, ಸುಬ್ರಹ್ಮಣ್ಯ ಮನೆಗೆ ಹೊರಟನಂತರ, ಪುಟ್ಟನನ್ನು ಮಲಗಿಸಿ, ಹಾಲಿನಲ್ಲಿ ಕುಳಿತಾಗ... ಮಗಳು ಪ್ರಭ ಅಮ್ಮನ ತೊಡೆಯ ಮೇಲೆ ತಲೆಯಿಟ್ಟು ಮಲಗಿ 'ಅಮ್ಮಾ, ಮನೆ ತುಂಬಾ ಚೆನ್ನಾಗಿದೆ. ನನಗೆ ತುಂಬಾ ಇಷ್ಟ ಆಯ್ತು... ಒಬ್ಬಳೇ ಇಷ್ಟೆಲ್ಲ ಮಾಡಿದ್ದೀಯ... ನೀನು ಗ್ರೇಟ್...' ಅಂದಳು.

'ಚಿಕ್ಕದು ಅಂತ ಅನ್ನಿಸ್ತಾ ನಿನಗೆ?' ಮಗಳ ತಲೆಕೂದಲಲ್ಲಿ ಕೈಯಾಡಿಸುತ್ತಾ ವಾಸಂತಿ ಕೇಳಿದಳು.

'ಇಲ್ಲಮ್ಮಾ... ಇಲ್ಲಿ ಒಂಥರಾ ನನಗೆ ನೆಮ್ಮದಿ ಅನ್ನಿಸುತ್ತೆ. ಬ್ಯಾಕ್ ಹೋಂ ಅನ್ನುವ ಫೀಲಿಂಗ್...' ಎಲ್ಲೋ ಕಳೆದವಳಂತೆ ಹೇಳಿದಳು 'ಅಪ್ಪನ ಜೊತೆ, ಚಿಕ್ಕಮ್ಮನ ಜೊತೆ... ಎಲ್ಲ ಚೆನ್ನಾಗಿರುತ್ತೆ. ತುಂಬಾ ಖುಷಿಯಾಗಿರ್ತೀನಿ. ಆ ತೋಟ, ಗದ್ದೆ... ಎಲ್ಲ ನೋಡ್ತೀನಿ...ಮನಸ್ಸಿಗೆ ಆನಂದ ಆಗುತ್ತೆ. ಆದ್ರೆ ನಿಜವಾಗಿ ಹೇಳಲಾ ಅಮ್ಮ... ನನಗೆ ಅದು ಯಾವುದೂ ನನ್ನದಲ್ಲ ಅನ್ನಿಸುತ್ತೆ. ಯಾಕೆ ಅಂತ ಗೊತ್ತಿಲ್ಲ. ನಿನ್ನನ್ನ ನೆನೆಸಿಕೊಂಡ್ರೆ ಸಾಕು. ನನ್ನ ಕಣ್ಣೊಳಗೆ, ಹೃದಯದೊಳಗೆ ಪೂರ್ತಿ ನೀನೇ ತುಂಬಿಕೊಂಡು ಬಿಡ್ತೀಯ ಅಮ್ಮ...' ಅವಳು ಕಣ್ಣು ತುಂಬಿಕೊಂಡಳು 'ಯಾರಾದ್ರೂ ಗರ್ಭಿಣಿ ಹೆಣ್ಣುಮಗಳನ್ನ ನೋಡಿದಾಗ ನನ್ನ ಹೃದಯ ಜೋರಾಗಿ ಒಂದು ಸಲ ಚೀರಿ ನಿಲ್ಲುತ್ತೆ... ನೀನು ನನ್ನನ್ನ ಹೊಟ್ಟೆಯಲ್ಲಿ ಹೊತ್ತು ಮದುವೆ ಮನೆಯ ಪಾತ್ರೆ ತೊಳೆಯುತ್ತಿದ್ದೆಯಲ್ಲಮ್ಮ... ಅದು ಸ್ವಾಭಿಮಾನಕ್ಕೋ, ಅವಮಾನಕ್ಕೋ... ಗೊತ್ತಿಲ್ಲ. ಆದರೆ ಅಮ್ಮ... ಅನ್ನಿಸುತ್ತೆ... ಮತ್ತೊಂದು ಜನ್ಮ ಅನ್ನೋದು ಇದ್ದರೆ ನಾನು ನಿನಗೆ ತಾಯಿ ಆಗಬೇಕು ಅಂತ...'

ವಾಸಂತಿ ಮಗಳ ತಲೆ ಸವರಿದಳು.

'ಏನೇನೋ ಹುಚ್ಚುಚ್ಚಾಗಿ ಯೋಚಿಸಬೇಡ ಪುಟ್ಟಿ. ಸಂತೋಷವಾಗಿದ್ದೀಯ. ಹಾಗೇ ಇರು. ಅಷ್ಟೆ. ಅರಮನೆ, ಬಂಗಲೆ, ಸಣ್ಣ ಮನೆ, ಮಣ್ಣಿನ ಮನೆ ಎಲ್ಲ ನಮ್ಮ ಕಲ್ಪನೆಯ ತೂಕದ ಬಟ್ಟಲುಗಳು. ಆದ್ರೆ ಹೃದಯದ ಒಳಗಿರುವ ಬೃಂದಾವನದಲ್ಲಿ ಕರೆದ ಹಾಲನ್ನು ಹೊರಗಿನ ಮನಸ್ಸು, ಬುದ್ಧಿಗಳಿಗೆ ಕೊಂಡುಕೊಳ್ಳಲು ಆಗೋಲ್ಲ... ಅದನ್ನ ಕೊಂಡುಕೊಳ್ಳುವವ ಅಲ್ಲಿರುವ ಕೃಷ್ಣ ಮಾತ್ರ. ಅವನು ನಿನ್ನ ರೂಪದಲ್ಲಿ ನನ್ನ ಬದುಕಿನಲ್ಲಿ ಬಂದಿದ್ದಾನೆ ಅಷ್ಟೆ...' ಮಗಳ ತಲೆ ಸವರುತ್ತಾ ಗುನುಗಿದಳು 'ಚಿನ್ನವ ಕೊಡನೆ, ರನ್ನವ ಕೊಡನೆ, ತನ್ನನೇ ಕೊಡುವನು ಬಾರೆ ಸಖಿ... ಬೃಂದಾವನಕೆ ಹಾಲನು ಮಾರಲು ಹೋಗುವ ಬಾರೇ ಬೇಗ ಸಖಿ'.

## ಎಂ.ಆರ್. ಮಂದಾರವಲ್ಲಿ

ಬೆಂಗಳೂರಿನಲ್ಲಿ ನೆಲೆಸಿರುವ ಮಂದಾರವಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸಂಶೋಧಕಿ. ಮನುಷ್ಯ ಸಂಬಂಧ ಮತ್ತು ಕೌಟುಂಬಿಕ ಸೂಕ್ಷ್ಮಗಳನ್ನು ಅವರ ಕತೆಗಳು ದಾಖಲಿಸುತ್ತವೆ. 'ಗೊಂದಲಗಳ ನಾಡಿನಲ್ಲಿ', 'ಪರಿಸರ ಎಂದರೇನು?', 'ಯಾನ ಪ್ರತಿಯಾನ' ಇವು ಅವರ ವೈಚಾರಿಕ, ಸಾಂಸ್ಕೃತಿಕ ಬರಹಗಳ ಪುಸ್ತಕಗಳು. 'ಅಳುವುದಿಲ್ಲವೇ ವಸು' ಅವರ ಕತೆಗಳ ಸಂಗ್ರಹ. 'ಅಂಧಮಕ್ಕಳ ಅರಿವಿನಂಗಣ' ಅವರ ಸಂಶೋಧನಾತ್ಮಕ ಕೃತಿ.